# PROCEEDINGS OF THE GOVERNMENT OF KARNATKA

SUB: Establishment of Corps of Detectives in the Criminal Investigation Department.

-----

## ORDER NO. HD 229 PEO 73 BANGALORE, DATED 15TH APRIL 1974

The Government have had under consideration for sometime past the question of establishing a Corps of Detectives in the Criminal Investigation Department for investigating cases involving economic and financial offences and major crimes which would require special knowledge of both law and investigation. In order to achieve maximum results in the detection of crimes and with a view also to inspiring public confidence in the police administration, it has been decided to build up a corps of detectives in the State CID.

2. A committee of Senior Police Officers was appointed to examine this matter in all its details. The Committee has observed that an expansion of the Criminal investigation Department along the existing lines will not meet the noted of the situation. With the opening up of the interior and improved communication facilities and with the development of science and technology, criminals have required new and sophisticated methods for perpetrating crime; and these methods were unknown to the criminals of an earlier era. Further, white collar crimes are being committed more and more by intelligent cheaters who adopt novel and scientific methods to do detection. Again, counterfeit currency cases and cases relating to theft of idols and antiques have also come to notice. Offences relating to persons such as abduction of girls for immoral purposes, maiming of children for begging are being committed with the increase in international tourists traffic, various other types of crimes are also likely to be imported into India. In this race, the criminals should not be allowed go got better of the police; the latter must keep themselves adequately equipped and, trained to meet the challenge.

3. The study of the crime statistics by the committee has disclosed the necessity for taking adequate steps to ensure that no important case goes undetected for want of sustained investigation. For this purpose, the CID would have to be manned by specially chosen officers of outstanding detective abilities.

4. The Corps.of Detectives will be divided into the following squads, each to deal with cases coming under a specific item for specialized crime and manned by the staff noted against each.

| | Supdt. of Police | Dy. Supdt of Police | Detectives | | | |
|---|---|---|---|---|---|---|
| | | | PIs | SIs | HCs | PCs |
| | 1 | 2 | 3 | 4 | 5 | 6 |
| I.(1) Homicide Squad to investigate important and complicated cases of murder | 1 | 2 | 12 | - | - | - |
| (2) Burglary Squad to investigate property offences Criminals | - | 1 | 6 | 4 | - | - |
| II. (3) Fraud Squad to investigate cases relating to misappropriation of funds becoming to Govt. & other Institutions, cases of cheating and forgery etc. | 1 | 3 | 20 | 6 | - | - |
| III(4) Counterfeit Currency Squad to investigate cases of counterfeiting of Indian & Foreign Currency | - | - | 10 | 2 | - | - |
| (5) Arms & Explosives Squad to investigate cases of illicit manufacture & smuggling of arms, ammunition and explosives. | 1 | 1 | 6 | 4 | - | - |
| IV.(6) Vice Squad to investigate cases of abduction of women, kidnapping of children and also offences under the Excise Act, Motor vehicles Act, Untouchability (Offences) Act, habitual offenders Act, S.I.T. Act & Essential Commodities Act etc. | - | 1 | 6 | 4 | - | - |
| (7) Anti-smuggling Squad to investigate cases of smuggling of narcotics, foreign liquor & foreign goods. | 1 | 1 | 8 | 2 | - | - |
| (8) Special enquiries squad to enquire into complaints & allegations made against persons and institutions etc. | - | 1 | 7 | 3 | - | - |
| V. Staff attached to the DIG, CID | - | - | - | - | 50 | 25 |
| | 4 | 10 | 75 | 25 | 50 | 25 |

LEGAL AND EXPERT SERVICE:

5. In view of the complicated nature of the cases to be handled, it is considered necessary to provide the Corps of Detectives with the assistance of one Legal Advisor on a salary of Rs. 1,500/- p.m., and one Assistant Legal Advisor on a salary of Rs. 600/- p.m., both of them being appointed on contract basis for a period of 3 years in the first instance.

6. The committee has also recommended that one Senior Auditor and one Junior Auditor may be provided for assisting the Corps of Detectives in handling of mis-appropriation and fraud. The Senior Auditor and the Junior Auditor will be drawn from the State Accounts Department on deputation basis.

MINISTERIAL STAFF:

7. For running this organization, provision of sufficient ministerial staff is indispensable. Taking into account the existing staff available in the State CID., the committee has recommended the sanction of additional posts of 4 Section Superintendents, 10 First Division Clerks, 16 Second Division Clerks, 12 Stenographers and 10 Typists.

TRANSPORT:

8. For the success of the scheme, facilities for fast movement to all corners of the State are absolutely necessary. Taking into account the vehicles now available in the State C.I.D., the committee has recommended the provision of 6 Ambassador Cars, 12 Jeeps and two one/ton vans.

INCENTIVES:

9. In order to attract the best talent available, the committee has considered various methods of providing incentives and has come to the conclusion that one of the ways to get the right type of officers is to sanction attractive special pays. Considering the special features of the work such as anonymity, isolation, long hours of work, heavy touring and also having regard to the need for economy all-round, the committee has recommend the following scales of Special pay to the attached to the posts.

| | | |
|---|---|---|
| 1. Superintendent of Police | - | Rs. 200/- p.m., each |
| 2. Dy.Superintendent of Police | - | Rs. 175/- p.m., each |
| 3. Circle Inspectors & Auditors | - | Rs. 150/- p.m., each |
| 4. Sub-Inspectors | - | Rs. 150/- p.m., each |
| 5. Head Constables | - | Rs. 75/- p.m., each |
| 6. Police Constables | - | Rs. 50/- p.m., each |

........4

QUARTERS



10. The Committee has suggested adequate ................ the kind quarters of the entire staff existing in Corps of Detectives.

RESIDENTIAL QUARTERS:

11. At present, residential quarters cannot be built available to the staff in Bangalore City. The committee has examined this problem and suggested the outright purchase from the Housing Board of 75 Middle Income Group Houses and 75 Low Income Group House to accommodate 75 Detective Circle Inspectors and 75 other Detective Executive Staff, or requisitioning of houses through the House Rent Controller for being allotted to the staff, the rent being borne by the Government. As this would take time, the Committee has recommended the sanction of Special House Rent Allowance of Rs. 250/- p.m. to each of those to whom houses cannot be provided free of rent.

12. After careful examination, the Government are pleased to accord sanction to the above proposals made by the committee for the establishment of a Corps of Detectives in the State C.I.D., Bangalore, subject to the following modifications.

(a) Special Pay:

The rates of Special pay sanctioned to the staff are as follows:

| POSTS | RATE OF SPL. PAY |
|---|---|
| 1. Superintendent of Police | Rs. 200/- p.m. |
| 2. Dy. Superintendent of Police | Rs. 175/- p.m. |
| 3. Circle Inspectors/ Auditors | Rs. 150/- p.m. |
| 4. Sub Inspectors of Police | Rs. 125/- p.m. |
| 5. Head Constables | Rs. 75/- p.m. |
| 6. Police Constables | Rs. 50/- p.m. |

(b) Residential Accommodation:

The Inspector General of Police will take action to provide rent-free residential accommodation to all the permanent of the Corps of Detectives according to their entitlements. He will allot, to the extent available, houses constructed for Police personnel to the staff of the Corps of Detectives. If this accommodation is not adequate, he may send proposals to Government for the sanction of House Rent Allowance to the remaining staff.

13. Action should be taken to complete the preliminaries of interview and selection of personnel so as to ensure that the both investigating, talent finds its way into the Corps of Detectives. The Selection of personnel will be sent to the Inspector General of Police by deputation of the existing staff in the Police Department. The Inspector General of Police will may down suitable principles and procedure for their selections. Qualified persons including retired Government servants may also be appointed on contract basis, in concurrence with the procedure laid down by Government for such appointments.

14. The period of sanction for the Corps of Detectives with its staff will be three-years in the first instance.

15. This order issues with the concurrence of the Finance Department, vide their U.O.No. 100.566/31/74 dt. 05.04.1974.

By order and in the name of the
Governor of Karnataka.

Sd/- K.S.Rajagopal,
Under Secretary to Government,
Home Department.

// C O P Y //

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ರಾಜ್ಯದಲ್ಲಿ ಸಿ.ಒ.ಡಿ (Corps of Detectives) ಯನ್ನು ಸಿ.ಐ.ಡಿ (Criminal Investigation Department) ಎಂದು ಪುನರ್ನಾಮಕರಣ ಮಾಡುವ ಬಗ್ಗೆ.

ಸರ್ಕಾರಿ ಆದೇಶ ಸಂ.ಒಇ 127 ಸಿಒಡಿ 08 ದಿನಾಂಕ 3.6.2009

ಓದಲಾಗಿದೆ:-1) ಸರ್ಕಾರಿ ಆದೇಶ ಸಂ.ಹೆಚ್‌ಡಿ 229 ಪಿಇಒ 73 ದಿನಾಂಕ 15.4.1974

2) ಪತ್ರ ಸಂ.ಆರ್‌ಎಲ್‌ಎನ್ (3)/11/2008-09 ದಿನಾಂಕ 27/30.9.2008 ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರಿಂದ.

ಪ್ರಸ್ತಾವನೆ

ಮೇಲೆ (1)ರಲ್ಲಿ ಓದಲಾದ ದಿನಾಂಕ 15.4.1974ರ ಸರ್ಕಾರಿ ಆದೇಶದಲ್ಲಿ ರಾಜ್ಯದ ಸಿ.ಐ.ಡಿ ವಿಭಾಗದಲ್ಲಿ ಸಿ.ಒ.ಡಿ ಎಂಬ ಒಂದು ವಿಶೇಷ ಘಟಕವನ್ನು ರಚಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿರುತ್ತದೆ.

ಮೇಲೆ (2)ರಲ್ಲಿ ಓದಲಾದ ದಿನಾಂಕ 27/30.9.2008ರ ಪತ್ರದಲ್ಲಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರು ಸದರಿ ಸಿ.ಒ.ಡಿ ಎಂಬ ಹೆಸರಿನಿಂದ ಕೆಲವೊಂದು ವ್ಯಾವಹಾರಿಕ ಅನಾನುಕೂಲಗಳು ಎದುರಾಗುತ್ತಿರುವುದರಿಂದ ಸದರಿ ಸಿ.ಒ.ಡಿ ಎಂಬ ಹೆಸರನ್ನು ಮಾರ್ಪಡಿಸಿ ಸಿ.ಐ.ಡಿ ಎಂದು ಪುನರ್ನಾಮಕರಣ ಮಾಡಲು ಕೋರಿರುತ್ತಾರೆ.

ದಿನಾಂಕ 22.5.2009ರಂದು ಮಾನ್ಯ ಗೃಹ ಸಚಿವರ ಕಚೇರಿಯಲ್ಲಿ ನಡೆದ ಚರ್ಚೆಯಲ್ಲಿ ಸಿ.ಒ.ಡಿ ಹೆಸರನ್ನು ಮಾರ್ಪಡಿಸಿ ಸಿ.ಐ.ಡಿ ಎಂದು ಪುನರ್ನಾಮಕರಣ ಮಾಡಿ ಇನ್ನು ಮುಂದೆ ವ್ಯವಹರಿಸಲು ಸರ್ಕಾರದ ಅನುಮೋದನೆಯನ್ನು ನೀಡಬಹುದೆಂದು ತೀರ್ಮಾನಿಸಲಾಗಿದೆ.

ಆದುದರಿಂದ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ

ಈ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು ರಾಜ್ಯದಲ್ಲಿ ಸಿ.ಒ.ಡಿ (Corps of Detectives) ಎಂಬ ಹೆಸರನ್ನು ಮಾರ್ಪಡಿಸಿ ಸಿ.ಐ.ಡಿ (Criminal Investigation Department) ಎಂದು ಪುನರ್ನಾಮಕರಣ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

P. Shivarama Bhat

(ಪಿ.ಶಿವರಾಮ ಭಟ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಅಪರಾಧಗಳು)

ಇವರಿಗೆ

1. ಮಹಾ ಲೇಖಪಾಲರು, ಕರ್ನಾಟಕ, ಬೆಂಗಳೂರು
2. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನೃಪತುಂಗ ರಸ್ತೆ, ಬೆಂಗಳೂರು
3. ಪೋಲೀಸ್ ಮಹಾ ನಿರ್ದೇಶಕರು, ಸಿ.ಒ.ಡಿ, ತರಬೇತಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಕಾರ್ಲ್‌ಟನ್ ಭವನ, ಅರಮನೆ ರಸ್ತೆ, ಬೆಂಗಳೂರು
4. ಜಿಲ್ಲಾ ಆರಕ್ಷಕಾಧೀಕ್ಷಕರು,
5. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಸಮನ್ವಯ)
6. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಸೇವಾ ನಿಯಮ-2)
7. ಹೆಚ್ಚುವರಿ ಪ್ರತಿ/ಶಾಖಾ ರಕ್ಷಾ ಕಡತ

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕ್ರಿಮಿನಲ್ ಇನ್ವೆಸ್ಟಿಗೇಷನ್ ಡಿಪಾರ್ಟ್‌ಮೆಂಟ್‌ನ (Criminal Investigation Department) ಪುನರ್ ರಚನೆಯ ಬಗ್ಗೆ.

**ಓದಲಾಗಿದೆ:**

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪತ್ರ ಸಂಖ್ಯೆ: ಆರ್.ಎಲ್.ಎನ್.(2)/31/2012-13 ದಿನಾಂಕ:08/01/2013.

**ಪ್ರಸ್ತಾವನೆ:**

ಮೇಲೆ ಓದಲಾದ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರ ಪತ್ರದಲ್ಲಿ ಆರ್ಥಿಕ ಮತ್ತು ಹಣಕಾಸಿನ ಅಪರಾಧ ಹಾಗೂ ಪ್ರಮುಖವಾದ ಗಂಭೀರ ಅಪರಾಧಗಳನ್ನು ತನಿಖೆ ನಡೆಸಲು ಕಾನೂನು ಮತ್ತು ತನಿಖೆಯಲ್ಲಿ ವಿಶೇಷ ಜ್ಞಾನ ಹೊಂದಿ ಅಪರಾಧಗಳನ್ನು ಪತ್ತೆ ಹಚ್ಚುವಲ್ಲಿ ಗರಿಷ್ಠ ಸಾಧನೆ ಸಾಧಿಸಿ ಸಾರ್ವಜನಿಕರಲ್ಲಿ ಪೋಲೀಸ್ ಆಡಳಿತದ ಬಗ್ಗೆ ವಿಶ್ವಾಸ ಮೂಡಿಸುವ ಸಲುವಾಗಿ ಸರ್ಕಾರದ ಆದೇಶ ಸಂ. ಹೆಚ್‌ಡಿ 229 ಪಿಇಜಿ 73, ದಿನಾಂಕ: 15/04/1974 ರಲ್ಲಿ *Criminal Investigation Department* (ಸಿಐಡಿ)ಯಲ್ಲಿ *Corps Of Detectives* (ಸಿಓಡಿ)ವನ್ನು ಸ್ಥಾಪಿಸಲಾಗಿದ್ದು, ತದ ನಂತರ ಸರ್ಕಾರದ ಆದೇಶ ಸಂ. ಒಇ 127 ಸಿಓಡಿ 08, ದಿನಾಂಕ: 03/06/2009 ರಲ್ಲಿ *Corps Of Detectives* (ಸಿಓಡಿ) ಯನ್ನು *Criminal Investigation Department* (ಸಿಐಡಿ) ಎಂದು ಪುನರ್ ನಾಮಕರಣಗೊಳಿಸಲಾಗಿರುತ್ತದೆ.

ಪ್ರಸ್ತುತ ಸಿಐಡಿ ಘಟಕವು ಅರಣ್ಯ ಘಟಕವನ್ನು ಒಳಗೊಂಡಂತೆ ಪೋಲೀಸ್ ಮಹಾ ನಿರ್ದೇಶಕರು, ಸಿಐಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು ರವರ ಮೇಲ್ವಿಚಾರಣೆ ಮತ್ತು ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತದೆ. ಸಿಐಡಿ ಘಟಕದ ವಿವಿಧ ದಳಗಳ ಸಂಯೋಜನೆ ಮತ್ತು ಇತರೆ ಕಾರ್ಯ ಕುರಿತು ಸರ್ಕಾರವು ಕಾಲ ಕಾಲಕ್ಕೆ ಬದಲಾವಣೆಗಳನ್ನು ಜಾರಿಗೊಳಿಸಿರುತ್ತದೆ.

ಅನೇಕ ವಿಧಗಳಲ್ಲಿ ಬೆಳೆಯುತ್ತಿರುವ ಅಪರಾಧಗಳು ಅಂದರೆ ಆರ್ಥಿಕ ಅಪರಾಧಗಳು, ಸೈಬರ್ ಅಪರಾಧಗಳು (Cyber Crimes) ಮತ್ತು ಮಾನವ ಕಳ್ಳ ಸಾಗಾಣಿಕೆ (Human Trafficking) ಮುಂತಾದವುಗಳು ಹೊಸ ಸವಾಲುಗಳನ್ನು ಸೃಷ್ಟಿಸಿರುವ ಕಾರಣ, ಪ್ರಸ್ತುತ ಇರುವ ತನಿಖಾ ವಿಧಾನವನ್ನು ತೀವ್ರ ಬದಲಾವಣೆ ಹಾಗೂ ಬಲಪಡಿಸುವ ಅವಶ್ಯಕತೆ ಇರುತ್ತದೆ. ಹಾಗೆಯೇ ಗ್ರಾಮಾಂತರ, ಗಡಿಭಾಗ ಒಳಗೊಂಡಂತೆ ಬೆಳೆಯುತ್ತಿರುವ ನಗರ ಪ್ರದೇಶಗಳ ಹೊರ ವಲಯಗಳಲ್ಲಿ ದರೋಡೆಯಂತಹ ಅಪರಾಧಗಳು ಗಣನೀಯವಾಗಿ ಇಳಿಮುಖವಾಗಿದ್ದರೂ ಸಹ ಬೆಂಗಳೂರು, ಬಳ್ಳಾರಿ ಮತ್ತು ಗುಲ್ಬರ್ಗಾಗಳಲ್ಲಿ *ದರೋಡೆ ಪ್ರತಿಬಂಧಕ ದಳಗಳು* ಅತಿಶಯವಾಗಿ ಕಾರ್ಯ ನಿರ್ವಹಿಸುತ್ತಿರುತ್ತದೆ. ಅಲ್ಲದೆ ರಾಜ್ಯದ ವಿವಿಧ ಭಾಗಗಳ ವರದಕ್ಷಿಣೆ ಸಾವು ಪ್ರಕರಣಗಳ ತನಿಖೆಯನ್ನು ಕಡ್ಡಾಯವಾಗಿ ಕೇಂದ್ರೀಕೃತಗೊಳಿಸಿ, ಸಿಐಡಿಯಲ್ಲಿ *ವರದಕ್ಷಿಣೆ ನಿಷೇಧ ದಳಕ್ಕೆ* ವಹಿಸಲಾಗಿತ್ತು. ಹಾಲಿ ವರದಕ್ಷಿಣೆ ಸಾವು ಪ್ರಕರಣಗಳ ತನಿಖೆಯನ್ನು ಸ್ಥಳೀಯ ಪೋಲೀಸರಿಗೆ

ಸರ್ಕಾರಿ ಆದೇಶ ಸಂಖ್ಯೆ ಓಇ 130 ಸಿಐಡಿ 2009 ಬೆಂಗಳೂರು ದಿನಾಂಕ 31.12.2009 ರಲ್ಲಿ ವಹಿಸಲಾಗಿರುವುದರಿಂದ *ವರದಕ್ಷಿಣೆ ನಿಷೇಧ ದಳ* ವನ್ನು ರಾಜ್ಯದಲ್ಲಿನ ಮಾನವ ಕಳ್ಳ ಸಾಗಾಣಿಕೆಯಲ್ಲಿನ ಸವಾಲುಗಳನ್ನು ಎದುರಿಸಲು ಅನುವಾಗುವಂತೆ *ಮಾನವ ಕಳ್ಳ ಸಾಗಾಣಿಕೆ ನಿಷೇಧ ದಳ (Anti-Human Trafficking Unit)* ಎಂದು ಪುನರ್ ಸ್ಥಾಪಿಸುವ ಅವಶ್ಯಕತೆ ಇರುತ್ತದೆ.

ಮುಂದುವರೆದಂತೆ ಭಾರತ ಸರ್ಕಾರವು, ಹಣಕಾಸು ವಂಚನೆ, ಖೋಟಾ ನೋಟು ಮುಂತಾದವುಗಳು ಹಾಗೂ ಸಂಗೀತ/ ವಿಡಿಯೋ, ಪುಸ್ತಕ, ಗಣಕಯಂತ್ರದ ತಂತ್ರಾಂಶಗಳ ನಕಲಿ(ಪೈರಸಿ) ಹಾವಳಿಗಳ ತನಿಖೆ ನಡೆಸಲು ಅನುವಾಗುವಂತೆ ವಿಶೇಷ ತನಿಖಾ ಘಟಕಗಳನ್ನು ಸೃಷ್ಟಿಸಲು ರಾಜ್ಯ ಸರ್ಕಾರಕ್ಕೆ ಮಾರ್ಗದರ್ಶನ ಮತ್ತು ನಿರ್ದೇಶನವನ್ನು ನೀಡುತ್ತಿರುತ್ತದೆ. ರಾಜ್ಯದ ವಿಧಾನ ಪರಿಷತ್ತು ಹಾಗೂ ವಿಧಾನ ಸಭೆಗಳಲ್ಲಿ ಮತ್ತು ವಿವಿಧ ಶಾಸನ ಸಮಿತಿಗಳಲ್ಲಿ ಚರ್ಚೆ ನಡೆದಾಗ ಆರ್ಥಿಕ ಅಪರಾಧಗಳು, ಮಾನವ ಕಳ್ಳ ಸಾಗಾಣಿಕೆ ಮತ್ತು ಮಾದಕ ದ್ರವ್ಯಗಳ ಸಾಗಾಟದಂತಹ ಹೊಸ ಅಪರಾಧಗಳನ್ನು ಎದುರಿಸಲು ಪೋಲೀಸ್ ಇಲಾಖೆಯು ಸಜ್ಜಾಗಬೇಕೆಂಬ ಅಭಿಪ್ರಾಯ ವ್ಯಕ್ತವಾಗಿರುತ್ತದೆ. ಸಿಐಡಿ ಘಟಕದ ಮಂಜೂರಾತಿ ಬಲ ದಿನಾಂಕ: 31/12/2012 ಕ್ಕೆ ಅನ್ವಯಿಸುವಂತೆ ಈ ಕೆಳಕಂಡಂತಿದೆ

***ಕಾರ್ಯಕಾರಿ ಸಿಬ್ಬಂದಿ***

| ಕ್ರಮ ಸಂಖ್ಯೆ | ಹುದ್ದೆ | ಮಂಜೂರಾತಿ ಸಂಖ್ಯೆ |
|---|---|---|
| 1 | ಡಿಜಿಪಿ | 1 |
| 2 | ಎಡಿಜಿಪಿ,ಇಓ | 1 |
| 3 | ಎಡಿಜಿಪಿ,ಸಿಐಡಿ | 1 |
| 4 | ಡಿಐಜಿಪಿ,ಇಓ | 1 |
| 5 | ಡಿಐಜಿಪಿ,ಸಿಐಡಿ | 1 |
| 6 | ಎಸ್.ಪಿ | 8 |
| 7 | ಡಿಎಸ್‌ಪಿ ಸಿವಿಲ್/ಡಿಟೆಕ್ಟಿವ್ | 61 |
| 8 | ಪಿಐ ಸಿವಿಲ್/ಡಿಟೆಕ್ಟಿವ್ | 60 |
| 9 | ಡಿಟೆಕ್ಟಿವ್ ಸಬ್ ಇನ್ಸ್‌ಪೆಕ್ಟರ್ | 40 |
| 10 | ಪಿಎಸ್‌ಐ ಸಿವಿಲ್ | 30 |
| 11 | ಸಿಹೆಚ್‌ಸಿ | 77 |
| 12 | ಸಿಪಿಸಿ | 84 |
| 13 | ಎಹೆಚ್‌ಸಿ ಆರ್ಡರ್ಲಿ | 2 |
| 14 | ಎಹೆಚ್‌ಸಿ ಟಿನ್‌ಸ್ಮಿತ್ | 1 |
| 15 | ಎಪಿಸಿ ಆರ್ಡರ್ಲಿ | 132 |
| 16 | ಎಹೆಚ್‌ಸಿ ಚಾಲಕರು | 19 |
| 17 | ಎಹೆಚ್‌ಸಿ ಮೆಕಾನಿಕ್ | 7 |
| 18 | ಎಪಿಸಿ ಚಾಲಕರು | 61 |
| 19 | ಎಪಿಸಿ ಕ್ಲೀನರ್ | 10 |
| 20 | ಎಪಿಸಿ ಎಂ.ಸಿ.ರೈಡರ್ | 4 |
| 21 | ಎಪಿಸಿ ಮೆಕಾನಿಕ್ | 2 |
| 22 | ಎಪಿಸಿ ಟಿನ್‌ಸ್ಮಿತ್ | 1 |
| | ಒಟ್ಟು | 604 |

ಲಿಪಿಕ ಸಿಬ್ಬಂದಿ –

| ಕ್ರಮ ಸಂಖ್ಯೆ | ಹುದ್ದೆ | ಮಂಜೂರಾತಿ ಸಂಖ್ಯೆ |
|---|---|---|
| 1 | ಆಡಳಿತಾಧಿಕಾರಿ | 1 |
| 2 | ಶಾಖಾಧೀಕ್ಷಕರು | 8 |
| 3 | ಪ್ರಥಮ ದರ್ಜೆ ಸಹಾಯಕರು | 24 |
| 4 | ದ್ವಿತಿಯ ದರ್ಜೆ ಸಹಾಯಕರು | 36 |
| 5 | ಶೀಘ್ರಲಿಪಿಗಾರರು | 22 |
| 6 | ಬೆರಳಚ್ಚುಗಾರರು | 22 |
| 7 | ದಲಾಯತ್ | 13 |
| 8 | ಕಾನೂನು ಸಲಹೆಗಾರರು | 4 |
| 9 | ಲೆಕ್ಕ ಪರಿಶೋಧಕರು | 2 |
| 10 | ಸ್ವೀಪರ್ | 9 |
| | ಒಟ್ಟು | 141 |

ದಳಗಳಲ್ಲಿನ ಮಂಜೂರಾತಿ ಬಲ (ಪೆಂಟೆಚಿವ್) –

| ದಳ | ಎಸ್.ಪಿ | ಡಿ.ಎಸ್.ಪಿ | ಪಿಐ/ಡಿಐ | ಪಿಎಸ್ ಐ | ಡಿಎಸ್ ಐ | ಸಿಹೆಚ್ ಸಿ | ಸಿಪಿಸಿ | ಒಟ್ಟು |
|---|---|---|---|---|---|---|---|---|
| ಹೆಚ್ &ಬಿ | 1 | 10 | 10 | 4 | 10 | 15 | 8 | 58 |
| ಇಓಎಸ್ | 1 | 10 | 10 | 6 | 10 | 15 | 11 | 63 |
| ಎಸ್ ಇ | 1 | 10 | 9 | 9 | 10 | 14 | 11 | 64 |
| ಸಿಐ & ಎನ್‌ಡಿಸಿ | 1 | 10 | 10 | 9 | 0 | 14 | 8 | 52 |
| ಎಡಿಎಸ್ | 2 | 3 | 9 | 1 | 0 | 4 | 28 | 47 |
| ಎಡಿಸಿ | 1 | 10 | 8 | 1 | 5 | 6 | 6 | 37 |
| ಸಿಸಿಪಿಎಸ್ | 1 | 8 | 4 | 0 | 5 | 9 | 12 | 39 |
| ಒಟ್ಟು | 8 | 61 | 60 | 30 | 40 | 77 | 84 | 360 |

ಪ್ರಸ್ತುತ ಸಿಐಡಿ ಘಟಕವು ಸಿಐಡಿ ಮತ್ತು ಆರ್ಥಿಕ ಅಪರಾಧಗಳು ಎಂಬ ವಿಭಾಗಗಳನ್ನು ಹೊಂದಿದ್ದು, ಪ್ರತಿ ವಿಭಾಗವು ಒಬ್ಬರು ಎಡಿಜಿಪಿ/ಐಜಿಪಿ ರವರ ಅಧೀನದಲ್ಲಿ ಈ ಕೆಳಗೆ ವಿವರಿಸಿರುವಂತೆ ಕಾರ್ಯ ನಿರ್ವಹಿಸುತ್ತಿರುತ್ತದೆ.

**I. ಸಿಐಡಿ–** ಸಿಐಡಿ ವಿಭಾಗವು ಈ ಕೆಳಕಂಡ ದಳಗಳನ್ನು ಒಳಗೊಂಡಿರುತ್ತದೆ.

1. ನರ ಹತ್ಯೆ ಮತ್ತು ಚೌರ್ಯ ದಳ **(Homicide & Burglary Squad) –**

ಈ ದಳವು ಕೆಳಕಂಡ ಪ್ರಕರಣಗಳನ್ನು ನಿರ್ವಹಿಸುತ್ತದೆ

- ಬಂಧನದಲ್ಲಿನ ಸಾವು (ಕಸ್ಟೋಡಿಯಲ್ ಡೆತ್)
- ಕೊಲೆ ಮತ್ತು ಲಾಭಕ್ಕಾಗಿ ಕೊಲೆ
- ವೃತ್ತಿಪರವಿಷ ಪ್ರಯೋಗ
- ಮನೆ ಕನ್ನ ಕಳವು /ಕಳ್ಳತನ
- ಕಳ್ಳತನ ಹಾಗೂ ಪುರಾತನವಸ್ತುಗಳ ಕಳವು
- ಅಪರಾಧಿ ಗುಂಪುಗಳ ಪ್ರಕರಣಗಳು (Gang Cases)

2. ವಿಶೇಷ ವಿಚಾರಣೆಗಳು **(Special Enquires) -**

ವ್ಯಕ್ತಿ ಹಾಗೂ ಸಂಸ್ಥೆಗಳ ವಿರುದ್ಧದ ದೂರು, ಆರೋಪಗಳಿಗೆ ಸಂಬಂಧಿಸಿದಂತೆ ಸರ್ಕಾರ ಹಾಗೂ ಮಹಾ ನಿರ್ದೇಶಕರು ಮತ್ತು ಪೋಲೀಸ್ ಮಹಾನಿರೀಕ್ಷಕರಿಂದ ವಹಿಸಲಾದ ಪ್ರಕರಣಗಳ ಗೌಪ್ಯ ವಿಚಾರಣೆಗಳು.

3. ದರೋಡೆ ಪ್ರತಿಬಂಧಕ ದಳ **(Anti-Dacoity Squad)** ಬೆಂಗಳೂರು

4. ದರೋಡೆ ಪ್ರತಿಬಂಧಕ ದಳ (**Anti-Dacoity Squad**) ಬಳ್ಳಾರಿ

5. ದರೋಡೆ ಪ್ರತಿಬಂಧಕ ದಳ (**Anti-Dacoity Squad**) ಗುಲ್ಬರ್ಗ -

ದರೋಡೆ ಪ್ರಕರಣಗಳನ್ನು ಎದುರಿಸಿ ಹಾಗೂ ವಿಶೇಷವಾಗಿ ಅಂತರ್ ರಾಜ್ಯ ಅಪರಾಧಿಗಳು ಭಾಗಿಯಾಗಿರುವಂತಹ ದರೋಡೆ ಪ್ರಕರಣಗಳ ತನಿಖೆ ನಡೆಸುವುದು. ಬೆಂಗಳೂರು, ಬಳ್ಳಾರಿ ಮತ್ತು ಗುಲ್ಬರ್ಗ ಗಳಲ್ಲಿ ಪ್ರತ್ಯೇಕ ದಳ ಸ್ಥಾಪಿಸಿದ್ದು ವಲಯಗಳ ಐಜಿಪಿ ರವರುಗಳು ತಮ್ಮ ವಲಯದಲ್ಲಿನ ದರೋಡೆ ಪ್ರಕರಣಗಳ ಪತ್ತೆಯಲ್ಲಿ ಈ ದಳದ ಸಹಕಾರವನ್ನು ಪಡೆಯ ಬಹುದಾಗಿರುತ್ತದೆ.

**II. ಆರ್ಥಿಕ ಅಪರಾಧಗಳ ವಿಭಾಗ–** ಆರ್ಥಿಕ ಅಪರಾಧಗಳ ವಿಭಾಗವು ಈ ಕೆಳಕಂಡ ದಳಗಳನ್ನು ಒಳಗೊಂಡಿರುತ್ತದೆ.

1. **ಆರ್ಥಿಕ ಅಪರಾಧ ದಳ (Economics Offences Squad) -**

ಈ ದಳವು ಆರ್ಥಿಕ ಅಪರಾಧಗಳು, ವಂಚನೆ, ಮೋಸ, ಹಣದುರ್ಬಳಕೆ ಮತ್ತು ನಂಬಿಕೆ ದ್ರೋಹ ಪ್ರಕರಣಗಳ ತನಿಖೆಯನ್ನು ನಿರ್ವಹಿಸುತ್ತದೆ. ವಂಚನೆ ದಳವು ಇತ್ತೀಚೆಗೆ ಆರ್ಥಿಕ ಅಪರಾಧ ದಳವಾಗಿ ಬದಲಾಗಿರುತ್ತದೆ.

2. **ಖೋಟಾ ನೋಟು, ಆಯುಧ ಮತ್ತು ಮಾದಕ ವಸ್ತು ನಿಷೇದ ದಳ (Counterfeit, Arms and Narcotics Squad) -**

- ಖೋಟಾ ನೋಟು
- ಖೋಟಾ ನಾಣ್ಯ
- ಸರ್ಕಾರದ ಆಯುಧ ಮತ್ತು ಮದ್ದುಗುಂಡುಗಳ ಕಳವು ಮತ್ತು ಆಯುಧಗಳ ಅಕ್ರಮ ಮಾರಾಟ
- ರಾಜಕೀಯ ಉದ್ದೇಶ ಹೊಂದಿರುವಂತಹ ಪ್ರಮುಖ ಅಪರಾಧಗಳು ಮತ್ತು ಆಯುಧ ಹಾಗೂ ಸ್ಫೋಟಕಗಳಿಗೆ ಸಂಬಂಧಿಸಿದಂತೆ ರಾಜಕೀಯ ಸ್ವರೂಪ ಪಡೆದಿರುವ ಅಪರಾಧಗಳು.
- ಆಯುಧ/ ಸ್ಫೋಟಕ ವಸ್ತುಗಳ ಅಕ್ರಮ ತಯಾರಿಕೆ ಮತ್ತು ಮಾರಾಟ
- ನಿಷೇದಿಸಲ್ಪಟ್ಟ ಮತ್ತುಬರಿಸುವ ಮಾದಕ ವಸ್ತು, ಔಷದ, ಎಲ್.ಎಸ್.ಡಿ, ಹಶೀಸ್ ಮತ್ತು ಮಾದಕ ದ್ರವ್ಯಗಳ ಕಳ್ಳಸಾಗಾಣಿಕೆ

3. **ವರದಕ್ಷಿಣ ನಿಷೇದ ದಳ (Anti Dowry Cell) -**

ವರದಕ್ಷಿಣೆ ನಿಷೇದ ದಳವು ಮುಖ್ಯವಾಗಿ ವರದಕ್ಷಿಣೆ ಸಾವು ಮತ್ತು ಸಂಬಂಧಿಸಿದ ಪ್ರಕರಣಗಳ ತನಿಖೆ ನಡೆಸುವುದು.

4. **ಸೈಬರ್ ಅಪರಾಧ ಪೋಲೀಸ್ ಠಾಣೆ (Cyber Crime Police Station) -**

ಸೈಬರ್ ಅಪರಾಧ ಪೋಲೀಸ್ ಠಾಣೆಯು *ಮಾಹಿತಿ ತಂತ್ರಜ್ಞಾನ ಅಧಿನಿಯಮ* (Information Technology Act, 2000) ದ ಅಡಿಯಲ್ಲಿನ ಪ್ರಕರಣಗಳ ತನಿಖೆ ನಡೆಸುವುದು.

ಪ್ರತಿ ದಳಗಳು ಪ್ರತ್ಯೇಕ ಪೋಲೀಸ್ ಅಧೀಕ್ಷಕರು ರವರ ಅಧೀನದಲ್ಲಿದ್ದು, ಸಿಐಡಿ ವಿಭಾಗದ ದಳಗಳು ಡಿಐಜಿಪಿ, ಸಿಐಡಿ ಮತ್ತು ಎಡಿಜಿಪಿ/ಐಜಿಪಿ ಸಿಐಡಿ ರವರ ಹಾಗೂ ಆರ್ಥಿಕ ಅಪರಾಧ ವಿಭಾಗದ ದಳಗಳು ಡಿಐಜಿಪಿ, ಇಓ ಮತ್ತು ಎಡಿಜಿಪಿ/ಐಜಿಪಿ ಇಓ ರವರ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತದೆ. ಪ್ರತಿ ದಳಗಳು ತನಿಖಾಧಿಕಾರಿಯಾಗಿ ಡಿ.ಎಸ್.ಪಿ. (ಸಿವಿಲ್/ ಡಿಟೆಕ್ಟಿವ್), ಪಿಐ (ಸಿವಿಲ್/ ಡಿಟೆಕ್ಟಿವ್), ಪಿಎಸ್ಐ (ಸಿವಿಲ್/ ಡಿಟೆಕ್ಟಿವ್), ಹೆಡ್ ಕಾನ್‌ಸ್ಟೆಬಲ್ ಮತ್ತು ಕಾನ್‌ಸ್ಟೆಬಲ್ ರವರನ್ನು ಒಳಗೊಂಡಿರುತ್ತದೆ. ದಳದ ಬಲವು ಕಾರ್ಯ ಪರಿಮಾಣದ ಮೇಲೆ ಅವಲಂಬಿತವಾಗಿದ್ದು, ಅದರಂತೆ ಕಾಲ ಕಾಲಕ್ಕೆ ಬದಲಾಗುತ್ತಿರುತ್ತದೆ. ಇದರ ಹೊರತಾಗಿ ಆಡಳಿತ, ಲೆಕ್ಕ ಮತ್ತು ಇತರೆ ವಿಷಯಗಳಿಗೆ ಸಂಬಂಧಿಸಿದಂತೆ

ಆಪಿಕ ಸಿಬ್ಬಂದಿಗಳು ಆಡಳಿತಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಡಿಐಜಿಪಿ, ಸಿಐಡಿ ರವರ ನಿಯಂತ್ರಣದಲ್ಲಿರುತ್ತದೆ.

ಬಹಳ ಕಾಲದಿಂದ ನಂತರ ಪ್ರಸ್ತುತ ಸಿಐಡಿ ಘಟಕದ ಕಾರ್ಯಗಳ ಸಂಪೂರ್ಣ ಪುನರ್ವಿಲೋಕನ ಮತ್ತು ಪುನರ್ ರಚನೆ ಅಗತ್ಯವಿರುತ್ತದೆ. ಅಲ್ಲದೆ ಭಾರತ ಸರ್ಕಾರವು ವಿಶೇಷವಾಗಿ ಮಾನವ ಕಳ್ಳ ಸಾಗಾಣಿಕೆ ಮತ್ತು ಹಣಕಾಸಿನ ಗುಪ್ತಚರ ಘಟಕ (ಎಫ್.ಐ.ಯು.), ಸೈಬರ್ ಅಪರಾಧ ಹಾಗೂ ಫೊರೆನ್ಸಿಕ್ಸ್ ಮುಂತಾದುವುಗಳಿಗೆ ಸಂಬಂಧಿಸಿದಂತೆ ಪ್ರಸ್ತಾಪಿಸಿರುವ ಹಾಗೆ ಸಿಐಡಿ ಘಟಕದಲ್ಲಿ ಗುರುತರ ಬದಲಾವಣೆ ಆಗಬೇಕಿರುತ್ತದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಇರುವ ದಳಗಳನ್ನು ಪುನರ್ ರಚಿಸಿ ವಿಭಾಗಗಳಾಗಿ ಹೆಸರಿಸಿ ಮಂಜೂರಾತಿ ನೀಡುವಂತೆ ಡಿಜಿ & ಐಜಿಪಿ ರವರು ಸರ್ಕಾರವನ್ನು ಕೋರಿರುತ್ತಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪ್ರಸ್ತಾವನೆಯನ್ನು ವಿವರವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 04 ಪಿಓಪಿ 2013**
**ಬೆಂಗಳೂರು, ದಿನಾಂಕ:12/02/2013.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪೋಲೀಸ್ ಇಲಾಖೆಯ ಕ್ರಿಮಿನಲ್ ಇನ್‌ವೆಸ್ಟಿಗೇಷನ್ ಡಿಪಾರ್ಟ್‌ಮೆಂಟ್ (Criminal Investigation Department) ಘಟಕವನ್ನು DGP , C.I.D. ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು ಅವರ ಮೇಲ್ವಿಚಾರಣೆ ಮತ್ತು ನಿಯಂತ್ರಣಕೊಳಪಟ್ಟ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ I, II ಮತ್ತು III ರಲ್ಲಿರುವಂತೆ ಪುನರ್ ರಚಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಮುಂದುವರೆದು, ಸರ್ಕಾರಿ ಆದೇಶ ಸಂಖ್ಯೆ:ಒಇ 273 ಪೊಸಿಪ 1987, ದಿನಾಂಕ:21/03/1988ರಲ್ಲಿ ಡಕಾಯಿತಿ ಪ್ರತಿಬಂಧಕ ದಳ, ಗುಲ್ಬರ್ಗಕ್ಕೆ ಮಂಜೂರು ಮಾಡಿರುವ 66 ಹುದ್ದೆಗಳು ಹಾಗೂ ಆದೇಶ ಸಂಖ್ಯೆ:ಹೆಚ್‌ಡಿ 141 ಪಿಓಪಿ 1991 ದಿನಾಂಕ:03/02/1992 ಮತ್ತು ಆದೇಶ ಸಂಖ್ಯೆ:ಹೆಚ್‌ಡಿ 65 ಪಿಓಪಿ 1992, ದಿನಾಂಕ:01/02/1993ರಲ್ಲಿ ಮಂಜೂರು ಮಾಡಿರುವ 10 ಹುದ್ದೆಗಳು ಸೇರಿದಂತೆ ಒಟ್ಟು 76 ಹುದ್ದೆಗಳನ್ನು **ಸಿಐಡಿ, ಬೆಂಗಳೂರು ಕೇಂದ್ರ ಘಟಕಕ್ಕೆ ವಿಲೀನಗೊಳಿಸಿ ಆದೇಶಿಸಿದೆ**. ಈ ಸಂಬಂಧ ಈ ಹಿಂದೆ ಗುಲ್ಬರ್ಗ, ಬೆಂಗಳೂರು ಮತ್ತು ಬಳ್ಳಾರಿಯಲ್ಲಿಗೆ ಮಂಜೂರು ಮಾಡಿದ ಡಕಾಯಿತಿ ಪ್ರತಿಬಂಧಕ ದಳಗಳನ್ನು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ- III ರ ತಖ್ತೆಯ ಕಲಂ 1 ರಲ್ಲಿ ಸೂಚಿಸಿರುವ ಬೆಂಗಳೂರು, ಮೈಸೂರು, ಗುಲ್ಬರ್ಗಾ, ದಾವಣಗೆರೆ, ಧಾರವಾಡ ಮತ್ತು ಮಂಗಳೂರು ವಲಯಗಳಲ್ಲಿ ಕ್ರಿಮಿನಲ್ ಇನ್‌ವೆಸ್ಟಿಗೇಷನ್ ಯೂನಿಟ್‌ಗಳನ್ನಾಗಿ ಪದನಾಮೀಕರಿಸಿ ಹಾಗೂ ತಖ್ತೆಯ ಕಲಂ 2 ರಿಂದ 7ರ ವರೆಗೆ ಸೂಚಿಸಿದಂತೆ ವಿವಿಧ ವೃಂದದ ಹುದ್ದೆಗಳನ್ನು ಮರುಹಂಚಿಕೆ ಮಾಡಿ ಆದೇಶಿಸಿದೆ.

ಸದರಿ ಸಿಐಡಿ ಘಟಕದ ಪುನರ್ ರಚನೆಯು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.

1. C.I.D. ಘಟಕದ ಕಾರ್ಯಕಾರಿ ಸಿಬ್ಬಂದಿಯ ಹಂಚಿಕೆಯು ಹಾಲಿ ಮಂಜೂರಾತಿ ಬಲವನ್ನು ವಿವಿಧ ವಿಭಾಗಗಳಲ್ಲಿನ ನಿರ್ದಿಷ್ಟ ಅವಶ್ಯಕತೆಗಳಿಗೆ ಅನುಗುಣವಾಗಿ ವಿವಿಧ ವಿಭಾಗ/ ಘಟಕಗಳಿಗೆ ಮತ್ತು ಕರ್ತವ್ಯಕ್ಕೆ ಮರು ಹಂಚಿಕೆ ಮಾಡಿ

ಪೊಲೀಸ್ ಮಹಾ ನಿರ್ದೇಶಕರು, ಸಿಐಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳುರವರು ಪ್ರತ್ಯೇಕ ಆದೇಶಗಳನ್ನು ಹೊರಡಿಸುವುದು. ಇದು ಒಟ್ಟು ಮಂಜೂರಾತಿ ಬಲಕ್ಕೆ ಸೀಮಿತವಾಗಿರತಕ್ಕದ್ದು.

2. ಪುನರ್ ರಚನೆಯಿಂದ ಯಾವುದೇ ಹೊಸ ಹುದ್ದೆಯನ್ನು ಸೃಜಿಸತಕ್ಕದ್ದಲ್ಲ.
3. ಯಾವುದೇ ಕಾರಣಕ್ಕೂ ಹೆಚ್ಚುವರಿ ಅನುದಾನ ಕೋರತಕ್ಕದ್ದಲ್ಲ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ:ಒಸಾಇ 3876 ಆಂಆಸ 2013, ದಿನಾಂಕ:23/01/2013ರಲ್ಲಿ ನೀಡಿದ ಸಹಮತಿ ಮೇರೆಗೆ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 01 ಟಿಎಫ್‌ಪಿ 1996, ದಿನಾಂಕ:10/07/1996 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,**
**ಮತ್ತು ಅವರ ಹೆಸರಿನಲ್ಲಿ,**

**[ವಿ. ಉಮೇಶ್]**
**ಸರ್ಕಾರದ ಪ್ರಧಾನ ಕಾರ್ಯದರ್ಶಿ,**
**ಒಳಾಡಳಿತ ಇಲಾಖೆ.**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಈ ಆದೇಶವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ, ಅದರ 750 ಪ್ರತಿಗಳನ್ನು ಒಳಾಡಳಿತ ಇಲಾಖೆಯ ಪೊಲೀಸ್ ವೆಚ್ಚ ಶಾಖೆಗೆ ಒದಗಿಸಲು ಕೋರಿದೆ.

ಗೆ:


1. ಮಹಾಲೇಖಪಾಲರು, (ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು.
3. ಮಹಾ ನಿರ್ದೇಶಕರು, ಸಿಐಡಿ, ಕಾರ್ಲ್‌ಟನ್ ಭವನ, ಬೆಂಗಳೂರು.
4. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ವಿಕಾಸ ಸೌಧ, ಬೆಂಗಳೂರು – 10 ಪ್ರತಿಯೊಂದಿಗೆ.
5. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು, ಒಳಾಡಳಿತ ಮತ್ತು ಸಾರಿಗೆ ಇಲಾಖೆ.
7. ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ [ಸಮನ್ವಯ].
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.
9. ಇದನ್ನು ಇಲಾಖೆ ವೆಬ್ ಸೈಟ್ www.karunadu.gov.in ರಲ್ಲಿ ನೋಡಬಹುದು.

ಪ್ರತಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ ರವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಿಸಿಎಎಸ್), ಒಳಾಡಳಿತ ಇಲಾಖೆ ರವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಕಾರ್ಯದರ್ಶಿಗಳು (ಪೊಲೀಸ್ ಸೇವೆಗಳು), ಒಳಾಡಳಿತ ಇಲಾಖೆ ರವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಜಂಟಿ ಕಾರ್ಯದರ್ಶಿಗಳು (ಕಾನೂನು ಮತ್ತು ಸುವ್ಯವಸ್ಥೆ), ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿಗಳು (ಸಮನ್ವಯ), ಒಳಾಡಳಿತ ಇಲಾಖೆ.
6. ಸರ್ಕಾರದ ಎಲ್ಲಾ ಅಧೀನ ಕಾರ್ಯದರ್ಶಿಗಳು / ಶಾಖಾಧಿಕಾರಿಗಳು, ಒಳಾಡಳಿತ ಇಲಾಖೆ.

ಅನುಬಂಧ–I

( ಸರ್ಕಾರಿ ಆದೇಶ ಸಂಖ್ಯೆ: ಹೆಚ್.ಡಿ 04 ಪಿಓಪಿ 2013, ದಿನಾಂಕ:12/02/2013)




(ವಿ. ಉಮೇಶ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಒಳಾಡಳಿತ ಇಲಾಖೆ

## ಅನುಬಂಧ-II

(ಸರ್ಕಾರಿ ಆದೇಶ ಸಂಖ್ಯೆ:ಹೆಚ್‌ಡಿ 04 ಪಿಓಪಿ 2013, ದಿನಾಂಕ:12/02/2013)

ಕಾರ್ಯವ್ಯಾಪ್ತಿ ಹಾಗೂ ನಿರ್ವಹಿಸಬೇಕಾದ ಕೆಲಸಗಳ ವಿವರ:

### I - ಸಿಐಡಿ ಭಾಗ (CID Wing)

ಈ ಭಾಗವು ಎಡಿಜಿಪಿ/ಐಜಿಪಿ ಮತ್ತು ಡಿಐಜಿಪಿ/ಸಿಐಡಿ ರವರ ಮೇಲ್ವಿಚಾರಣೆಯಲ್ಲಿ ಈ ಕೆಳಕಂಡ ವಿಭಾಗ/ಘಟಕಗಳನ್ನು ಒಳಗೊಂಡಿರುವುದು –

**- ಇಂಟರ್‌ಪೋಲ್ (INTERPOL) -**

ಈ ಘಟಕ ಇಂಟರ್‌ಪೋಲ್ ಲೈಜನ್ ಅಧಿಕಾರಿಯಾಗಿರುವ (State Interpol Liaison Officer) ಎಡಿಜಿಪಿ/ಐಜಿಪಿ ಸಿಐಡಿ ರವರ ನೇರ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುವುದು.

**- ತಾಂತ್ರಿಕ ಸಹಾಯ ಘಟಕ (Technical Support Unit)**

ಈ ಘಟಕವು ಎಡಿಜಿಪಿ/ಐಜಿಪಿ, ಸಿಐಡಿ ರವರ ನೇರ ಮೇಲ್ವಿಚಾರಣೆಯಲ್ಲಿರುವುದು

**1. ಪೊಲೀಸ್ ಅಧೀಕ್ಷಕರು (ಆಡಳಿತ) – ಐಪಿಎಸ್ ದರ್ಜೆಯ ಹುದ್ದೆ**

**(i) ಆಡಳಿತ (Administration)**

- ಜಿಲ್ಲೆಗಳಲ್ಲಿನ ಪೊಲೀಸ್ ಅಧೀಕ್ಷಕರವರು ಜಿಲ್ಲಾ ಮಟ್ಟದಲ್ಲಿನ ಅಧಿಕಾರಿಯಾಗಿ ಚಲಾಯಿಸುವ ವಿತ್ತಾಧಿಕಾರ/ಆಡಳಿತಾತ್ಮಕ ಅಧಿಕಾರಗಳನ್ನು ನಿರ್ವಹಿಸುವುದು.
- ಆಡಳಿತಾಧಿಕಾರಿ ಮತ್ತು ಲಿಪಿಕ ಸಿಬ್ಬಂದಿವರ್ಗದ ಕಾರ್ಯಗಳ ಮೇಲ್ವಿಚಾರಣೆ ಮತ್ತು ಆಡಳಿತ.
- ವಾಹನ ಸಾರಿಗೆ
- ಕಟ್ಟಡ ಮತ್ತು ಎಸ್ಟೇಟ್ – ಎಸ್ಟೇಟ್ ಅಧಿಕಾರಿ
- ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ – ಮಾಹಿತಿ ಹಕ್ಕು ಕಾಯಿದೆಯ ಅನುಷ್ಠಾನ.
- ಇತರೆ ದೂರುಗಳು, ಶಾಸಕಾಂಗದ ಕಾರ್ಯಗಳು, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ/ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ಸಂಬಂಧಿಸಿದ ವಿಷಯಗಳು, ಸಾರ್ವಜನಿಕ ಸಂಪರ್ಕ, ಸಹಕಾರ ಮತ್ತು ಇತ್ಯಾದಿ.
- ಸಹಾಯಕ ಇಂಟರ್‌ಪೋಲ್ ಲೈಸನ್ ಅಧಿಕಾರಿಯಾಗಿ ನೇರವಾಗಿ ಎಡಿಜಿಪಿ/ಐಜಿಪಿ ಸಿಐಡಿ ರವರಿಗೆ ವರದಿ ಮಾಡುವುದು.
- ಮೇಲಾಧಿಕಾರಿಗಳು ವಹಿಸಿದ ಇನ್ನಿತರ ಕರ್ತವ್ಯಗಳು.

**(ii) ಕ್ರಿಮಿನಲ್ ಇಂಟಲಿಜೆನ್ಸ್ ಯುನಿಟ್ಸ್ (Criminal Intelligence Units)**

ಕಾರ್ಯೋನ್ಮುಖ ಅಪರಾಧಗಳ ಕುರಿತು ಮಾಹಿತಿ ಸಂಗ್ರಹಿಸಿ, ವಲಯಾಧಿಕಾರಿಗಳಿಗೆ ಸಹಕರಿಸಲು ಅನುವಾಗುವಂತೆ ಪ್ರತಿ ಪೊಲೀಸ್ ವಲಯದಲ್ಲಿ ಅಂದರೆ ಬೆಂಗಳೂರು, ಮೈಸೂರು, ಗುಲ್ಬರ್ಗಾ, ದಾವಣಗೆರೆ ಧಾರವಾಡ ಮತ್ತು ಮಂಗಳೂರು ಕೇಂದ್ರಸ್ಥಾನ ಕರ್ತವ್ಯ ನಿರ್ವಹಿಸುವುದು. ಈ ಘಟಕಗಳು ಸಂಬಂಧಿಸಿದ ವಲಯದ ಭೌಗೋಳಿಕ ವ್ಯಾಪ್ತಿಗೆ ಸೇರಿದ ಜಿಲ್ಲಾ ಪೊಲೀಸ್ ಘಟಕ ಹಾಗೂ ಕಮೀಷನರೇಟ್ ಘಟಕಗಳಿಗೆ ಅಪರಾಧ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುವುದು.

**2. ನರಹತ್ಯೆ ಮತ್ತು ಚೌರ್ಯ ವಿಭಾಗ (Homicide & Burglary Division)**

- ಮಹಿಳೆ ಮತ್ತು ಮಕ್ಕಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಹೊರತುಪಡಿಸಿ ಪ್ರಮುಖವಾದ ಮತ್ತು ಎಲ್ಲಾ ಕ್ಲಿಷ್ಟವಾದ ಕೊಲೆ ಮತ್ತು ಲಾಭಕ್ಕಾಗಿ ಕೊಲೆಯಂತಹ ಪ್ರಕರಣಗಳು
- ಬಂಧನದಲ್ಲಿನ ಎಲ್ಲಾ ಸಾವು
- ವೃತ್ತಿಪರ ವಿಷ ಪ್ರಯೋಗ ಪ್ರಕರಣಗಳು

- ಆಸ್ತಿ ಸಂಬಂಧ ಅಂದರೆ ದರೋಡೆ, ಲೂಟಿ, ಮನೆ ಕನ್ನ ಕಳವು ಮತ್ತು ಕಳ್ಳತನ
- ವಿಶೇಷವಾಗಿ ಅಂತರರಾಜ್ಯ ಅಪರಾಧಿಗಳಿಂದ ಎಸಗಲ್ಪಟ್ಟ ಪ್ರಕರಣಗಳು.
- ಕಳ್ಳತನ ಮತ್ತು ಪುರಾತನ ವಸ್ತುಗಳ ಕಳ್ಳತನ.
- ಅಪರಾಧಿ ಗುಂಪುಗಳ ಪ್ರಕರಣಗಳು.
- ಮೇಲಾಧಿಕಾರಿಗಳು ವಹಿಸಿದ ಇನ್ನಿತರ ಕರ್ತವ್ಯಗಳು.

### ೩. ವಿಶೇಷ ವಿಚಾರಣೆಗಳ ವಿಭಾಗ (Special Enquires Division)

- ವ್ಯಕ್ತಿ ಹಾಗೂ ಸಂಸ್ಥೆಗಳ ವಿರುದ್ಧದ ದೂರು, ಆರೋಪಗಳಿಗೆ ಸಂಬಂಧಿಸಿದಂತೆ ಸರ್ಕಾರದ ಹಾಗೂ ಪೋಲೀಸ್ ಮಹಾ ನಿರ್ದೇಶಕರ ರವರಿಂದ ವಹಿಸಲಾದ ಪ್ರಕರಣಗಳ ಗೌಪ್ಯ ವಿಚಾರಣೆಗಳು.
- ನರಹತ್ಯೆ ಮತ್ತು ಚೌರ್ಯ ಹಾಗೂ ಸ್ಥಳೀಯ ವಿಶೇಷ ಕಾಯ್ದೆಗಳಿಂದ ಹೊರತಾದ ಐಪಿಸಿ ಪ್ರಕರಣಗಳು
- ಮೇಲಾಧಿಕಾರಿಗಳು ವಹಿಸಿದ ಇನ್ನಿತರ ಕರ್ತವ್ಯಗಳು.

### 4. ಮಾನವ ಕಳ್ಳ ಸಾಗಾಣಿಕೆ ನಿರೋಧಕ ಘಟಕ (Anti-Human Trafficking Unit)

- ಮಾನವ ಕಳ್ಳ ಸಾಗಾಣಿಕೆಗೆ ಸಂಬಂಧಿಸಿದಂತಹ ಪ್ರಕರಣಗಳು ಜಿಲ್ಲೆಗಳಲ್ಲಿನ/ಕಮೀಷನರೇಟ್ ಗಳಲ್ಲಿನ ಮಾನವ ಕಳ್ಳ ಸಾಗಾಣಿಕೆ ಘಟಕಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣ .
- ಎಲ್ಲಾ ಬಂಧನದಲ್ಲಿನ ಅತ್ಯಾಚಾರ (All Custodial Rape Cases)
- ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಅಪರಾಧಗಳಿಗೆ ಸಂಬಂಧಿಸಿದ ಪ್ರಕರಣಗಳು.
- ವಿಶ್ವಸಂಸ್ಥೆ (U.N.) ಸರ್ಕಾರ, ರಾಷ್ಟ್ರೀಯ ಮಾನವ ಹಕ್ಕು ಆಯೋಗ, ಸರ್ವೋಚ್ಚ ನ್ಯಾಯಾಲಯ/ಉಚ್ಚ ನ್ಯಾಯಾಲಯಗಳು ಗೊತ್ತುಪಡಿಸಿದಂತೆ ಕರಾರುಗಳ ರೀತ್ಯಾ ನೋಡಲ್ ಏಜೆನ್ಸಿಯಾಗಿ ಕರ್ತವ್ಯ ನಿರ್ವಹಿಸುವುದು.
- ಲಿಂಗಸಂವೇದನಶೀಲತೆಯ ಕುರಿತು ಪರಿಣತಿಯನ್ನು ಅಭಿವೃದ್ಧಿ ಪಡಿಸುವುದು ಮತ್ತು ತರಬೇತಿ ನೀಡುವುದು
- ನಾಪತ್ತೆಯಾದ ವ್ಯಕ್ತಿಗಳ/ ಪತ್ತೆಹಚ್ಚಲಾಗದ ಶವಗಳ ವಿವರಗಳ ಬ್ಯೂರೋ
- ಮೇಲಾಧಿಕಾರಿಗಳು ವಹಿಸಿದ ಇನ್ನಿತರ ಕರ್ತವ್ಯಗಳು.

## II - ಆರ್ಥಿಕ ಅಪರಾಧಗಳ ಭಾಗ (Economic Offences Wing) -

ಆರ್ಥಿಕ ಅಪರಾಧಗಳ ಭಾಗವು ಎ.ಡಿ.ಜಿ.ಪಿ./ಐ.ಜಿ.ಪಿ. ಮತ್ತು ಡಿ.ಐ.ಜಿ.ಪಿ. ಆರ್ಥಿಕ ಅಪರಾಧಗಳು ರವರ ಮೇಲ್ವಿಚಾರಣೆಯಲ್ಲಿ ಈ ಕೆಳಕಂಡ ವಿಭಾಗ/ಘಟಕಗಳನ್ನು ಒಳಗೊಂಡಿರುವುದು -

1. **ಸೈಬರ್ ಅಪರಾಧ ವಿಭಾಗ (Cyber Crime Division)** - ಪೋಲೀಸ್ ಅಧೀಕ್ಷಕರು, ಐ.ಪಿ.ಎಸ್. ಶ್ರೇಣಿ ರವರ ಮೇಲ್ವಿಚಾರಣೆಯಲ್ಲಿ.

- ಸೈಬರ್ ಅಪರಾಧ ಪೋಲೀಸ್ ಠಾಣೆ/ಗಳು
- ಸೈಬರ್ ಅಪರಾಧ ಪೋಲೀಸ್ ಠಾಣೆಯು ಪ್ರಕರಣಗಳನ್ನು ಮಾಹಿತಿ ತಂತ್ರಜ್ಞಾನ ಅಧಿನಿಯಮದಡಿ ತನಿಖೆ ನಡೆಸುವುದು.
- ಐ.ಎಸ್.ಪಿ./ಟೆಲಿಕಾಂ ಸೇವಾಕರ್ತರೊಡನೆ ನೋಡಲ್ ಏಜೆನ್ಸಿ ಆಗಿ ಕಾರ್ಯನಿರ್ವಹಿಸುವುದು.
- ಮೇಲಾಧಿಕಾರಿಗಳು ವಹಿಸಿದ ಇನ್ನಿತರ ಕರ್ತವ್ಯಗಳು.

## 2. ಆರ್ಥಿಕ ಅಪರಾಧಗಳ ವಿಭಾಗ (Economic Offences Division) -

- ವಂಚನೆ ಮತ್ತು ಹಣ ದುರ್ಬಳಕೆ ತನಿಖೆ ಹಾಗೂ ವಿಚಾರಣೆ (ಬ್ಯಾಂಕಿಂಗ್ ವಲಯವನ್ನು ಹೊರತುಪಡಿಸಿ)
- ಸಹಕಾರಿ ಸಂಘಸಂಸ್ಥೆಗಳನ್ನು ಒಳಗೊಂಡಂತಹ ವಂಚನೆಗಳು.
- ಮೋಸ ಮತ್ತು ನಕಲಿ ದಾಖಲೆ ಸೃಷ್ಟನೆ/ಸಹಿ
- ನಂಬಿಕೆ ದ್ರೋಹದ ಪ್ರಕರಣಗಳು
- ಸರ್ಕಾರ ಮತ್ತು ಇತರೆ ಸಂಸ್ಥೆಗಳಿಗೆ ಸೇರಿದ ಹಣದ ದುರ್ಬಳಕೆ.
- ಆರ್ಥಿಕ ಅಪರಾಧಗಳಿಗೆ ಸಂಬಂಧಿಸಿದ ಎಲ್ಲಾ ಪ್ರಕರಣಗಳು.
- ಮೇಲಾಧಿಕಾರಿಗಳು ವಹಿಸಿದ ಇನ್ನಿತರ ಕರ್ತವ್ಯಗಳು.

## 3. ಫೈನಾನ್ಸಿಯಲ್ ಇಂಟೆಲಿಜೆನ್ಸ್ ಯುನಿಟ್ (Financial Intelligence Unit) -

- ಫೈನಾನ್ಸಿಯಲ್ ಇಂಟೆಲಿಜೆನ್ಸ್ ಯುನಿಟ್ – ಕಮಿಷನರ್ ಆಫ್ ಪೋಲೀಸ್/ಜಿಲ್ಲಾ ಮಟ್ಟದ ಎಫ್.ಐ.ಯುಗಳ ಮೇಲುಸ್ತುವಾರಿ ಮತ್ತು ನಿಯಂತ್ರಣ
- ಸರ್ಕಾರ ಮತ್ತು ಸರ್ಕಾರೇತರ ಬ್ಯಾಂಕ್‌ಗಳಿಗೆ ಸಂಬಂಧಿಸಿದಂತಹ ರೂ. ಒಂದು ಕೋಟಿ ಮೀರಿದಂತಹ ಎಲ್ಲಾ ವಂಚನೆ ಮತ್ತು ಅವ್ಯವಹಾರಗಳ ತನಿಖೆ
- ನಾನ್ ಬ್ಯಾಂಕಿಂಗ್ ಫೈನಾನ್ಸಿಯಲ್ ಕಂಪನೀಸ್ (N.B.F.C)
- ಭಾರತೀಯ ರಿಜರ್ವ್ ಬ್ಯಾಂಕ್‌ನೊಡನೆ ಸಹಕರಿಸುವ ಕಾರ್ಯ ಮತ್ತು ನೋಡಲ್ ಏಜೆನ್ಸಿ.
- ಕಂಪನಿ ಕಾನೂನುಗಳಡಿಯಲ್ಲಿನ ಜಾರಿ ನಿರ್ದೇಶನಾಲಯ, ಡಿಆರ್‌ಐಗಳ ಪ್ರಕರಣಗಳು
- ಕಾಫಿಪೋಸಾಗೆ (COFEPOSA) ಸಂಬಂಧಿಸಿದ ವಿಷಯಗಳು, ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (FEMA), P.M.L Act.
- ಖೋಟಾ ನೋಟು (FICN)
- ಖೋಟಾ ನಾಣ್ಯ
- ಆರ್ಥಿಕ ಅಪರಾಧಗಳ ನಡೆಯುವ ಸಾಧ್ಯತೆಯ ಬಗ್ಗೆ ಮುಂಗಡ ಮಾಹಿತಿ ಸಂಗ್ರಹಿಸಿ ಸಂಬಂಧಿಸಿದ ಘಟಕಗಳೊಂದಿಗೆ ವಿನಿಮಯ ಮಾಡಿಕೊಳ್ಳುವುದು.
- ಮೇಲಾಧಿಕಾರಿಗಳು ವಹಿಸಿದ ಇನ್ನಿತರ ಕರ್ತವ್ಯಗಳು.

## 4. ಆಯುಧ ಮತ್ತು ಮಾದಕ ವಸ್ತು ನಿಷೇದ ವಿಭಾಗ (Arms and Narcotics Division)

- ಸರ್ಕಾರದ ಆಯುಧ ಮತ್ತು ಮದ್ದುಗುಂಡುಗಳ ಕಳವು ಮತ್ತು ಆಯುಧಗಳ ಅಕ್ರಮ ಮಾರಾಟ
- ಆಯುಧ ಹಾಗೂ ಸ್ಫೋಟಕಗಳಿಗೆ ಸಂಬಂಧಿಸಿದಂತೆ ರಾಜಕೀಯ ಸ್ವರೂಪ ಪಡೆದಿರುವ ಅಪರಾಧಗಳು.
- ಆಯುಧ/ ಸ್ಫೋಟಕ ವಸ್ತುಗಳ ಅಕ್ರಮ ತಯಾರಿಕೆ ಮತ್ತು ಮಾರಾಟ.
- ಮತ್ತುಬರಿಸುವ ಹಾಗು ಮಾದಕ ವಸ್ತುಗಳ ಕಳ್ಳ ಸಾಗಣಿಕೆ
- ಮಾದಕ ದ್ರವ್ಯ ಘಟಕ, ಬೆಂಗಳೂರು, ಬೆಳಗಾವಿ ಮತ್ತು ಮಂಗಳೂರು ಇವುಗಳ ಉಸ್ತುವಾರಿ ಮತ್ತು ಮೇಲ್ವಿಚಾರಣೆ.
- ಕೃತಿ ಚೌರ್ಯ ಕಾಯ್ದೆಯಡಿಯ ನಕಲಿ ಸಂಗೀತ/ವಿಡಿಯೋ/ಪುಸ್ತಕಗಳ/ಗಣಕಯಂತ್ರ/ ಮೊಬೈಲ್ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಇನ್ನಿತರ
- ಮೇಲಾಧಿಕಾರಿಗಳು ವಹಿಸಿದ ಇನ್ನಿತರ ಕರ್ತವ್ಯಗಳು.

# III. <u>ಸೈಬರ್ ಫೋರೆನ್ಸಿಕ್ ಘಟಕ (Cyber Forensic Unit)</u>-

ಈ ಘಟಕವು ನೇರವಾಗಿ ಡಿ.ಜಿ.ಪಿ. ಸಿಐಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು ರವರ ನೇರ ಉಸ್ತುವಾರಿಯಲ್ಲಿ ಕಾರ್ಯ ನಿರ್ವಹಿಸುವುದು. ಈ ಘಟಕಕ್ಕೆ

ಸಿಐಡಿ ಯಲ್ಲಿ ಕೆಲಸ ನಿರ್ವಹಿಸುತ್ತಿರುವವರಲ್ಲಿ ತರಬೇತಿ ಹೊಂದಿದ ಹಾಗೂ ಅಧಿಕೃತ ಪ್ರಮಾಣ ಪತ್ರ ಪಡೆದಿರುವ (trained & certified) ಡಿವೈಎಸ್‌ಪಿ / ಪೊಲೀಸ್ ಇನ್ಸ್‌ಪೆಕ್ಟರ್ / ಪಿಎಸ್‌ಐ ಗಳನ್ನು ಕೆಲಸ ನಿರ್ವಹಿಸಲು ನೇಮಿಸುವುದು.

[ವಿ. ಉಮೇಶ್]
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ.

<u>ಅನುಬಂಧ-III</u>

(ಸರ್ಕಾರಿ ಆದೇಶ ಸಂಖ್ಯೆ:ಹೆಚ್‌ಡಿ 04 ಪಿಓಪಿ 2013, ದಿನಾಂಕ:12/02/2013)

ಕ್ರಿಮಿನಲ್ ಇನ್‌ವೆಸ್ಟಿಗೇಷನ್ ಯೂನಿಟ್‌ನ ಕಾರ್ಯಕಾರಿ ಸಿಬ್ಬಂದಿಗಳ ಬಲ

| ಕೇಂದ್ರ ಸ್ಥಾನ | ಡಿವೈಎಸ್‌ಪಿ | ಪಿಐ | ಪಿ.ಎಸ್.ಐ. | ಸಿಹೆಚ್‌ಸಿ | ಸಿಪಿಸಿ | ಎಪಿಸಿ | ಒಟ್ಟು |
|---|---|---|---|---|---|---|---|
| (1) | (2) | (3) | (4) | (5) | (6) | (7) | |
| ಬೆಂಗಳೂರು | 1 | 1 | 1 | 1 | 4 | 1 | 9 |
| ಮೈಸೂರು | 1 | 1 | 1 | 1 | 4 | 1 | 9 |
| ಗುಲ್ಬರ್ಗಾ | 1 | 1 | 1 | 1 | 4 | 1 | 9 |
| ದಾವಣಗೆರೆ | 1 | 1 | 1 | 1 | 4 | 1 | 9 |
| ಧಾರವಾಡ | 1 | 1 | 1 | 1 | 4 | 1 | 9 |
| ಮಂಗಳೂರು | 1 | 1 | 1 | 1 | 4 | 1 | 9 |
| ಒಟ್ಟು | 6 | 6 | 6 | 6 | 24 | 6 | 54 |

[ವಿ. ಉಮೇಶ್]
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ.